2017 ಕ.ತೀ.ವ. 855

## ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿ ಶ್ರೀ ಸುಭ್ರೊ ಕಮಲ್ ಮುಖರ್ಜಿ
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರವಿ ಮಳಿಮಠ್

## ಮೆ|| ಸನ್‌ವಿಕ್ ಸ್ಟೀಲ್ ಪ್ರೈ. ಲಿಮಿಟೆಡ್ –ವಿರುದ್ಧ– ಭಾರತ ಸರ್ಕಾರ, ಕಲ್ಲಿದ್ದಲು ಮತ್ತು ಗಣಿ ಇಲಾಖೆಯ ಮಂತ್ರಾಲಯ ಮತ್ತು ಇತರರು*

ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.

ಗಣಿಗಳು ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1957.

ಇಲ್ಲಿನ ಅರ್ಜಿದಾರನಿಗೆ ಗಣಿಗಾರಿಕೆ ಗುತ್ತಿಗೆಯನ್ನು ನೀಡದಿರುವುದರಿಂದ ಬಾಧಿತನಾಗಿ ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾನೆ.

ರಾಜ್ಯ ಸರ್ಕಾರವು ಜುಲೈ 20, 2004ರಂದು ಖನಿಜಗಳ ರಿಯಾಯಿತಿ ನಿಯಮಗಳು, 1960ರ 59ನೇ ನಿಯಮದ ಅಡಿಯಲ್ಲಿ ಹೊರಡಿಸಿದ ಅಧಿಸೂಚನೆಯಲ್ಲಿ ಗಣಿಗಾರಿಕೆಯ ಗುತ್ತಿಗೆಯನ್ನು ಮಂಜೂರು ಮಾಡುವುದಕ್ಕಾಗಿ ಸಾರ್ವಜನಿಕರಿಂದ ಅರ್ಜಿಯನ್ನು ಆಹ್ವಾನಿಸಿತ್ತು.

ಪ್ರತ್ಯರ್ಜಿದಾರ ಸಂಖ್ಯೆ 4 ಇವರು 25ನೇ ಸೆಪ್ಟೆಂಬರ್ 2004ರಂದು ಗಣಿಗಾರಿಕೆ ಗುತ್ತಿಗೆಗಾಗಿ ಅರ್ಜಿಯನ್ನು ಹಾಕಿರುತ್ತಾರೆ. ರಿಟ್ ಅರ್ಜಿದಾರರು 21 ಮೇ 2005ರಂದು ಪ್ರತ್ಯರ್ಜಿದಾರರು ಅರ್ಜಿ ಹಾಕಿರುವ ಗಣಿಗಾರಿಕೆ ಗುತ್ತಿಗೆಯ ಅದೇ ಸ್ಥಳಕ್ಕೆಯೇ

* ರಿಟ್ ಅರ್ಜಿ ಸಂಖ್ಯೆ: 41373/2010 (ಜಿಎಂ–ಎಂಎಂ–ಎಸ್)
ದಿನಾಂಕ: 14ನೇ ಜೂನ್, 2016.

ರಿಟ್ ಅರ್ಜಿದಾರರು ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಗಾಗಿ ಅರ್ಜಿಯನ್ನು ದಾಖಲಿಸಿರುತ್ತಾರೆ. ಈ ಸಂಬಂಧದಲ್ಲಿ ಗಣಿಗಾರಿಕೆ ಗುತ್ತಿಗೆಗಾಗಿ ಪ್ರತ್ಯರ್ಜಿದಾರನು ಸಂಖ್ಯೆ 4 ಮೊದಲು ಅರ್ಜಿ ಸಲ್ಲಿಸಿರುತ್ತದೆ.

ರಾಜ್ಯ ಸರ್ಕಾರವು, ಪ್ರತ್ಯರ್ಜಿದಾರ ಸಂಖ್ಯೆ.4 ಇದರ ಪರವಾಗಿ ಗಣಿಗಾರಿಕೆಯ ಗುತ್ತಿಗೆಯನ್ನು ಮಂಜೂರು ಮಾಡುವುದಕ್ಕಾಗಿ 27ನೇ ಸೆಪ್ಟೆಂಬರ್ 2005ರಂದು ಶಿಫಾರಸ್ಸು ಮಾಡಿರುತ್ತದೆ. ಈ ಗಣಿಗಾರಿಕೆ ಗುತ್ತಿಗೆಯನ್ನು ಮಂಜೂರು ಮಾಡುವುದಕ್ಕಾಗಿ ನಿರ್ದಿಷ್ಟ ಕೆಲವು ವಿಷಯಗಳ ಸಂಬಂಧದಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ನಡುವೆ ಪತ್ರ ವ್ಯವಹಾರ ನಡೆದಿರುವುದು ಇಲ್ಲಿ ಕಂಡುಬರುತ್ತದೆ. ಕೊನೆಗೆ, ಕೇಂದ್ರ ಸರ್ಕಾರವು 9ನೇ ಮಾರ್ಚ್ 2006ರಂದು ರಾಜ್ಯ ಸರ್ಕಾರದ ಶಿಫಾರಸ್ಸುಗಳನ್ನು ಸ್ವೀಕರಿಸುತ್ತದೆ ಮತ್ತು ಸದರಿ ಅಧಿನಿಯಮದ 5ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಪ್ರತ್ಯರ್ಜಿದಾರ ಸಂಖ್ಯೆ 4ರ ಪರವಾಗಿ ರಾಜ್ಯ ಸರ್ಕಾರದ ಮಂಜೂರಾತಿಯನ್ನು ಅನುಮೋದಿಸಿದೆ.

ರಿಟ್ ಅರ್ಜಿದಾರರು ಪರಿಷ್ಕರಣಾ ಪ್ರಾಧಿಕಾರಕ್ಕೂ ಈ ಸಂಬಂಧದಲ್ಲಿ ಅರ್ಜಿಯನ್ನು ನಿವೇದಿಸಿರುತ್ತಾರೆ. ಪರಿಷ್ಕರಣಾ ಪ್ರಾಧಿಕಾರ ರಿಟ್ ಅರ್ಜಿದಾರರು ಸಲ್ಲಿಸಿದ ಪ್ರಸ್ತಾವನೆಗಳಿಗಿಂತ ಪ್ರತ್ಯರ್ಜಿದಾರ ಸಂಖ್ಯೆ.4 ಸಲ್ಲಿಸಿದ ಪ್ರಸ್ತಾವನೆಗಳು ಉತ್ತಮವಾಗಿರುವುದು ಸ್ಪಷ್ಟಗೊಂಡ ಪರಿಣಾಮ ರಿಟ್ ಅರ್ಜಿದಾರರು ಸಲ್ಲಿಸಿದ ಪರಿಷ್ಕರಣಾ ಅರ್ಜಿಯನ್ನು ವಜಾ ಮಾಡಿರುತ್ತದೆ. ಆದಾಗ್ಯೂ ಈ ರಿಟ್ ಅರ್ಜಿಯನ್ನು ಸಲ್ಲಿಸಿದೆ.

ಪರಿಷ್ಕರಣಾ ಆದೇಶ ವಿರುದ್ಧ ಹಸ್ತಕ್ಷೇಪದ ಅವಕಾಶವು ತುಂಬಾ ಪರಿಮಿತವಾಗಿದೆ. ಕೆಳ ನ್ಯಾಯಾಲಯಕ್ಕೆ ರಿಟ್ ಉದ್ದೇಶದ ಮಾನದಂಡವನ್ನು ನಿರ್ವಹಿಸಲು ನಿಶ್ಚಿತ ಅಧಿಕಾರ ವ್ಯಾಪ್ತಿಯಲ್ಲಿ ಅಧಿಕಾರವನ್ನು ಹೊಂದಿರತಕ್ಕದ್ದು. ಕೆಳ ನ್ಯಾಯಾಲಯಗಳು ಅಂಥ ಅಧಿಕಾರವನ್ನು ಸಮರ್ಥವಾಗಿ ಚಲಾಯಿಸಬೇಕಾಗುತ್ತದೆ ಮತ್ತು ಯುಕ್ತ

**ಮೊಕದ್ದಮೆಗಳಲ್ಲಿ ಮಾತ್ರವೇ ಅದರ ಪ್ರಾಧಿಕಾರದ ಕರಾರಿನೊಳಗೆ ಆದೇಶ ನೀಡಬೇಕಾಗುತ್ತದೆ ಮತ್ತು ಕೆಲವು ತಪ್ಪುಗಳನ್ನು ಸರಿಪಡಿಸಲು ಸಾಧ್ಯವಾಗುವುದಿಲ್ಲ. ಅಧೀಕ್ಷಣೆಯ ಅಧಿಕಾರವನ್ನು ಸಂಗತಿಯ ತಪ್ಪನ್ನು ಸರಿಪಡಿಸುವುದಕ್ಕೆ ಅಥವಾ ಸಂಗತಿಗಳ ನಿರ್ಣಯಗಳನ್ನು ತಳ್ಳಿಹಾಕುವುದಕ್ಕೆ ಪ್ರಾರ್ಥಿಸಬಾರದು.**

**ಪ್ರತ್ಯರ್ಜಿದಾರರ ಪ್ರಸ್ತಾವನೆಗಳು ರಿಟ್ ಅರ್ಜಿದಾರರ ಪ್ರಸ್ತಾವನೆಗಳಿಗಿಂತ ಉತ್ತಮವಾಗಿವೆ ಎಂದು ಪರಿಷ್ಕರಣಾ ಪ್ರಾಧಿಕಾರವು ನಿರ್ಣಯಿಸಿರುವಾಗ, ನಾವು, ರಿಟ್ ಅನ್ನು ಈ ನ್ಯಾಯಾಲಯದಲ್ಲಿ ಅದನ್ನು ಆಕ್ಷೇಪಿಸುವುದು ಸರಿಯಾದುದಲ್ಲವೆಂದು ಭಾವಿಸಿದ್ದೇವೆ ಎಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ವಜಾಗೊಳಿಸಿದೆ.**

| ***ಉಲ್ಲೇಖಿಸಲಾದ ಮೊಕದ್ದಮೆ:*** | ***ಪ್ಯಾರಾದಲ್ಲಿ*** |
|---|---|
| *1. (2010) 13 ಎಸ್‌ಸಿಸಿ 1<br>ಸಂಡೂರು ಮ್ಯಾಂಗನೀಸ್ ಮತ್ತು<br>ಕಬ್ಬಿಣ ಅದಿರು ಲಿಮಿಟೆಡ್<br>–ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು* | *(ಉಲ್ಲೇ) 8* |

ಅರ್ಜಿದಾರರ ಪರ : ಶ್ರೀ ಎಲ್.ಎಂ. ಚಿದಾನಂದಯ್ಯ, ವಕೀಲರು ಇವರ ಪರವಾಗಿ ಶ್ರೀ ಉದಯ್ ಹೊಳ್ಳ, ಹಿರಿಯ ವಕೀಲರು,

ಪ್ರತ್ಯರ್ಜಿದಾರರ ಪರ :

1 ಮತ್ತು 5ನೇ ಪ್ರತ್ಯರ್ಜಿದಾರರ ಪರ : ಶ್ರೀ ಕೃಷ್ಣ ಎಸ್. ದೀಕ್ಷಿತ್, ಎಎಸ್‌ಜಿ

2 ಮತ್ತು 3ನೇ ಪ್ರತ್ಯರ್ಜಿದಾರರ ಪರ : ಶ್ರೀ ಐ. ತಾರಾನಾಥ್ ಪೂಜಾರಿ, ಎಜಿಎ

4ನೇ ಪ್ರತ್ಯರ್ಜಿದಾರರ ಪರ : ಶ್ರೀ ಬದ್ರಿ ವಿಶಾಲ್, ವಕೀಲರು ಇವರ ಪರವಾಗಿ ಶ್ರೀ ಎಸ್. ವಿಜಯ್‌ಶಂಕರ್, ಹಿರಿಯ ವಕೀಲರು.

## ಆಜ್ಞೆ

**ಮುಖ್ಯ ನ್ಯಾಯಮೂರ್ತಿ ಸುಭ್ರೊ ಕಮಲ್ ಮುಖರ್ಜಿ :**

ಆದೇಶಕ್ಕಾಗಿ ಈ ವಿಷಯವು ಈಗಾಗಲೇ ಪಟ್ಟಿಯಾಗಿದ್ದರೂ, ಪಕ್ಷಕಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರುಗಳ ಸಮ್ಮತಿಯ ಮೂಲಕ ನಾವು ಈ ರಿಟ್ ಅರ್ಜಿಯನ್ನು ಸುನಾವಣೆಗಾಗಿ ತೆಗೆದುಕೊಂಡಿದ್ದೇವೆ.

2. ಇದೊಂದು ರಿಟ್ ಅರ್ಜಿ ಆಗಿದೆ. ಸನ್‌ವಿಕ್ ಸ್ಟೀಲ್ ಪ್ರೈವೇಟ್ ಲಿಮಿಟೆಡ್ ಅವರು ದಿನಾಂಕ 30ನೇ ನವೆಂಬರ್ 2010ರಲ್ಲಿ ಗಣಿಗಳ ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1957ರ (ಸಂಕ್ಷಿಪ್ತತೆಗಾಗಿ ಸದರಿ ಅಧಿನಿಯಮ) ಅಡಿಯಲ್ಲಿ ಪರಿಷ್ಕರಣಾ ಪ್ರಾಧಿಕಾರದ ಆದೇಶವನ್ನು ತೃಪ್ತಿಕರವಲ್ಲದ ಪರಿಷ್ಕರಣೆ ಎಂದು ಆಕ್ಷೇಪಿಸಿರುವ ರಿಟ್ ಅರ್ಜಿ ಇದಾಗಿದೆ.

3. ರಾಜ್ಯ ಸರ್ಕಾರವು ಜುಲೈ 20, 2004ರಂದು ಖನಿಜಗಳ ರಿಯಾಯಿತಿ ನಿಯಮಗಳು, 1960ರ 59ನೇ ನಿಯಮದ ಅಡಿಯಲ್ಲಿ ಹೊರಡಿಸಿದ ಅಧಿಸೂಚನೆಯಲ್ಲಿ ಗಣಿಗಾರಿಕೆಯ ಗುತ್ತಿಗೆಯನ್ನು ಮಂಜೂರು ಮಾಡುವುದಕ್ಕಾಗಿ ಸಾರ್ವಜನಿಕರಿಂದ ಅರ್ಜಿಯನ್ನು ಆಹ್ವಾನಿಸಿತ್ತು.

4. ಪ್ರತ್ಯರ್ಜಿದಾರ ಸಂಖ್ಯೆ 4 ಇದು 25ನೇ ಸೆಪ್ಟೆಂಬರ್, 2004ರಂದು ಗಣಿಗಾರಿಕೆ ಗುತ್ತಿಗೆಗಾಗಿ ಅರ್ಜಿಯನ್ನು ಹಾಕಿರುತ್ತದೆ. ರಿಟ್ ಅರ್ಜಿದಾರರು 21 ಮೇ 2005ರಂದು ಪ್ರತ್ಯರ್ಜಿದಾರರು ಅರ್ಜಿ ಹಾಕಿರುವ ಗಣಿಗಾರಿಕೆ ಗುತ್ತಿಗೆಯ ಅದೇ ಸ್ಥಳಕ್ಕೆಯೇ ರಿಟ್ ಅರ್ಜಿದಾರರು ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಗಾಗಿ ಅರ್ಜಿಯನ್ನು ದಾಖಲಿಸಿರುತ್ತಾರೆ. ಈ ಸಂಬಂಧದಲ್ಲಿ ಗಣಿಗಾರಿಕೆ ಗುತ್ತಿಗೆಗಾಗಿ ಪ್ರತ್ಯರ್ಜಿದಾರನ ಸಂಖ್ಯೆ 4 ಮೊದಲು ಅರ್ಜಿ ಸಲ್ಲಿಸಿರುತ್ತದೆ.

5. ರಾಜ್ಯ ಸರ್ಕಾರವು, ಪ್ರತ್ಯರ್ಜಿದಾರ ಸಂಖ್ಯೆ.4 ಇದರ ಪರವಾಗಿ ಗಣಿಗಾರಿಕೆಯ ಗುತ್ತಿಗೆಯನ್ನು ಮಂಜೂರು ಮಾಡುವುದಕ್ಕಾಗಿ 27ನೇ ಸೆಪ್ಟೆಂಬರ್ 2005ರಂದು ಶಿಫಾರಸ್ಸು ಮಾಡಿರುತ್ತದೆ. ಈ ಗಣಿಗಾರಿಕೆ ಗುತ್ತಿಗೆಯನ್ನು ಮಂಜೂರು ಮಾಡುವುದಕ್ಕಾಗಿ ನಿರ್ದಿಷ್ಟ ಕೆಲವು ವಿಷಯಗಳ ಸಂಬಂಧದಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ನಡುವೆ ಪತ್ರವ್ಯವಹಾರ ನಡೆದಿರುವುದು ಇಲ್ಲಿ ಕಂಡು ಬರುತ್ತದೆ. ಕೊನೆಗೆ, ಕೇಂದ್ರ ಸರ್ಕಾರವು 9ನೇ ಮಾರ್ಚ್ 2006ರಂದು ರಾಜ್ಯ ಸರ್ಕಾರದ ಶಿಫಾರಸ್ಸುಗಳನ್ನು ಸ್ವೀಕರಿಸುತ್ತದೆ ಮತ್ತು ಸದರಿ ಅಧಿನಿಯಮದ 5ನೇ ಪ್ರಕರಣದ (1)ನೇ ಉಪ–ಪ್ರಕರಣದ ಅಡಿಯಲ್ಲಿ ಪ್ರತ್ಯರ್ಜಿದಾರ ಸಂಖ್ಯೆ 4ರ ಪರವಾಗಿ ರಾಜ್ಯ ಸರ್ಕಾರದ ಮಂಜೂರಾತಿಯನ್ನು ಅದು ಅನುಮೋದಿಸಿದೆ.

6. ಈ ರಿಟ್ ಅರ್ಜಿದಾರರು ಪ್ರಾರಂಭಿಕವಾಗಿ, ಪ್ರತ್ಯರ್ಜಿದಾರ ಸಂಖ್ಯೆ 4ರ ಪರವಾಗಿ ರಾಜ್ಯ ಸರ್ಕಾರದ ಶಿಫಾರಸ್ಸನ್ನು ಆಕ್ಷೇಪಿಸಿ ಒಂದು ರಿಟ್ ಅರ್ಜಿಯನ್ನು ದಾಖಲಿಸಿರುವರು. ಆ ರಿಟ್ ಅರ್ಜಿಯನ್ನು ಕೇಂದ್ರ ಸರ್ಕಾರ ಪರಿಷ್ಕರಣಾ ಕ್ರಮದ ಮೂಲಕ ಈ ಅರ್ಜಿದಾರರು ಹೊಂದಿರುವ ಪರ್ಯಾಯ ಪರಿಹಾರೋಪಾಯ ಕಾರಣದ ಮೇಲೆ ಅದನ್ನು ವಜಾಗೊಳಿಸಲಾಗಿದೆ.

7. ರಿಟ್ ಅರ್ಜಿದಾರರು ಪರಿಷ್ಕರಣಾ ಪ್ರಾಧಿಕಾರಕ್ಕೂ ಈ ಸಂಬಂಧದಲ್ಲಿ ಅರ್ಜಿಯನ್ನು ನಿವೇದಿಸಿರುತ್ತಾರೆ. ಪರಿಷ್ಕರಣಾ ಪ್ರಾಧಿಕಾರ ರಿಟ್ ಅರ್ಜಿದಾರರು ಸಲ್ಲಿಸಿದ ಪ್ರಸ್ತಾವನೆಗಳಿಗಿಂತ ಪ್ರತ್ಯರ್ಜಿದಾರ ಸಂಖ್ಯೆ.4 ಸಲ್ಲಿಸಿದ ಪ್ರಸ್ತಾವನೆಗಳೂ ಉತ್ತಮವಾಗಿರುವುದು ಸ್ಪಷ್ಟಗೊಂಡ ಪರಿಣಾಮ ರಿಟ್ ಅರ್ಜಿದಾರರು ಸಲ್ಲಿಸಿದ ಪರಿಷ್ಕರಣಾ ಅರ್ಜಿಯನ್ನು ವಜಾ ಮಾಡಿರುತ್ತದೆ. ಆದಾಗ್ಯೂ ಈ ರಿಟ್ ಅರ್ಜಿಯನ್ನು ಸಲ್ಲಿಸಿದೆ.

8. ರಿಟ್ ಅರ್ಜಿದಾರರ ಪರವಾಗಿ ಶ್ರೀ ಉದಯ ಹೊಳ್ಳ, ಮಾನ್ಯ ಹಿರಿಯ ವಕೀಲರು ಹಾಜರಾಗಿರುವರು. ಅವರು ಮುಖ್ಯ ಮಂತ್ರಿಗಳು, ಯಾವುದೇ ಅರ್ಜಿಯನ್ನು ಗಮನಕ್ಕೆ ತೆಗೆದುಕೊಳ್ಳದೆ, ಒಂದೇ ಸಾಲಿನ ಆದೇಶವನ್ನು ಹೊರಡಿಸಿರುವರು,

ಇದು ಸಂಪೂರ್ಣವಾಗಿ ಕಾನೂನುಬಾಹಿರ ನಿರ್ಣಯವೆಂದು ನಿವೇದಿಸಿರುವರು. ಅವರು ಇದೇ ರೀತಿಯ ಸಂಗತಿಗಳನ್ನು ಹೊಂದಿದ್ದ, ***ಸಂಡೂರು ಮ್ಯಾಂಗನೀಸ್ ಮತ್ತು ಕಬ್ಬಿಣ ಅದಿರು ಲಿಮಿಟೆಡ್ –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು*** [1] ಮೊಕದ್ದಮೆಯಲ್ಲಿ ಮುಖ್ಯಮಂತ್ರಿಗಳು ಹೊರಡಿಸಿದ ಅಂಥ ಆದೇಶವನ್ನು ಭಾರತದ ಸರ್ವೋಚ್ಚ ನ್ಯಾಯಾಲಯವು ವಜಾ ಮಾಡಿರುವ ಅಂಶವನ್ನು ನಿವೇದಿಸಿರುವರು. ಎರಡನೇಯದಾಗಿ, ಅವರು ಪರಿಷ್ಕರಣಾ ಪ್ರಾಧಿಕಾರವು ಇದನ್ನೆಲ್ಲಾ ಸರಿಯಾಗಿ ಗಮನಕ್ಕೆ ತಂದುಕೊಂಡಿರುವುದಿಲ್ಲವೆಂದು ಮತ್ತು ಯಾಂತ್ರಿಕವಾಗಿ ಅದು ಈ ಪರಿಷ್ಕರಣಾ ಅರ್ಜಿಯನ್ನು ವಜಾ ಮಾಡಿರುತ್ತದೆ ಎಂದು ನಿವೇದಿಸಿರುವರು.

9. ಇದಕ್ಕೆ ವಿರೋಧವಾಗಿ, ಪ್ರತ್ಯರ್ಜಿದಾರ ಸಂಖ್ಯೆ 4ರ ಪರವಾಗಿ ಮಾನ್ಯ ಹಿರಿಯ ವಕೀಲರಾದ ಶ್ರೀ ಎಸ್. ವಿಜಯಶಂಕರ್ ಹಾಜರಾಗಿರುವರು, ಅವರು ಜಾರಿಗೆ ತರಲಾದ 2015ರ ತಿದ್ದುಪಡಿ ಅಧಿನಿಯಮದ ದೃಷ್ಟಿಯಲ್ಲಿಯೂ ತಮ್ಮ ಕ್ಲೇಮುದಾರರ ಅರ್ಜಿಯು ಸುರಕ್ಷಿತಗೊಂಡಿರುತ್ತದೆ ಮತ್ತು ಅದರ ಹೊರತಾಗಿ, ಆ ಕೂಡಲೇ ಪ್ರತ್ಯರ್ಜಿದಾರ ಸಂಖ್ಯೆ.4 ಇದು ಗಣಿಗಾರಿಕೆ ಪ್ರಾರಂಭಿಸುವುದಕ್ಕೆ ಅನುಮತಿಸಲಾಗಿರುತ್ತದೆ. 2015ರ ತಿದ್ದುಪಡಿ ಅಧಿನಿಯಮ ಜಾರಿಯಾದ ದಿನಾಂಕದಿಂದ ಎರಡು ವರ್ಷಗಳ ಅವಧಿ ಕ್ಲೇಮುದಾರರ ಗಣಿಗಾರಿಕೆ ಗುತ್ತಿಗೆ ಅವಧಿಯಾಗಿರುವ ಕಾರಣ ಅದು ಕಾಲವನ್ನು ವಿಳಂಬಮಾಡಲು ಅನುವು ಮಾಡಿಕೊಡದೇ ನನ್ನ ಕ್ಲೇಮುದಾರರು ಆ ಕೂಡಲೇ ಗಣಿಗಾರಿಕೆ ಪ್ರಾರಂಭಿಸಿರುವರು ಎಂದು ನಿವೇದಿಸಿರುವರು.

10. ಪರಿಷ್ಕರಣಾ ಆದೇಶದ ವಿರುದ್ಧ ಹಸ್ತಕ್ಷೇಪದ ಅವಕಾಶವು ತುಂಬಾ ಪರಿಮಿತವಾಗಿದೆ. ಕೆಳ ನ್ಯಾಯಾಲಯಕ್ಕೆ ರಿಟ್ ಉದ್ದೇಶದ ಮಾನದಂಡವನ್ನು ನಿರ್ವಹಿಸಲು ನಿಶ್ಚಿತ ಅಧಿಕಾರವ್ಯಾಪ್ತಿಯಲ್ಲಿ ಅಧಿಕಾರವನ್ನು ಹೊಂದಿರತಕ್ಕದ್ದು. ಕೆಳ ನ್ಯಾಯಾಲಯಗಳು ಅಂಥ ಅಧಿಕಾರವನ್ನು ಸಮರ್ಥವಾಗಿ ಚಲಾಯಿಸಬೇಕಾಗುತ್ತದೆ ಮತ್ತು ಯುಕ್ತ ಮೊಕದ್ದಮೆಗಳಲ್ಲಿ ಮಾತ್ರವೇ ಅದರ ಪ್ರಾಧಿಕಾರದ ಕರಾರಿನೊಳಗೆ ಆದೇಶ ನೀಡಬೇಕಾಗುತ್ತದೆ ಮತ್ತು ಕೆಲವು ತಪ್ಪುಗಳನ್ನು ಸರಿಪಡಿಸಲು

1. (2010) 13 ಎಸ್‌ಸಿಸಿ 1

ಸಾಧ್ಯವಾಗುವುದಿಲ್ಲ. ಅಧೀಕ್ಷಣೆಯ ಅಧಿಕಾರವನ್ನು ಸಂಗತಿಯ ತಪ್ಪನ್ನು ಸರಿಪಡಿಸುವುದಕ್ಕೆ ಅಥವಾ ಸಂಗತಿಗಳ ನಿರ್ಣಯಗಳನ್ನು ತಳ್ಳಿಹಾಕುವುದಕ್ಕೆ ಪ್ರಾರ್ಥಿಸಬಾರದು.

11. ಮುಖ್ಯಮಂತ್ರಿಗಳು ಪ್ರತ್ಯರ್ಜಿದಾರ ಸಂಖ್ಯೆ.4ರ ಪರವಾಗಿ ಮಾಡಿದ ಶಿಫಾರಸು ಸಮರ್ಥವಾಗಿದೆ ಎಂದು ಭಾವಿಸಬೇಕೆ ಹೊರತು, ಗುಣಾರ್ಹತೆಯನ್ನು ಸರಿಯಾಗಿ ಗಮನಿಸದೆ ಅಂಥ ಶಿಫಾರಸ್ಸು ದುರುದ್ದೇಶದಿಂದ ಕೂಡಿದೆ ಎಂದು ಭಾವಿಸಿರುವುದು ಹಾಗೂ ಕೇಂದ್ರ ಸರ್ಕಾರವು ಯುಕ್ತ ಅರ್ಜಿಯನ್ನು ಗಮನಕ್ಕೆ ತಂದುಕೊಂಡ ನಂತರವೇ ಅಂಥ ಶಿಫಾರಸ್ಸನ್ನು ಅನುಮೋದಿಸಿರುತ್ತದೆ ಎಂದು ನಿವೇದಿಸಿರುವರು.

12. ಪ್ರತ್ಯರ್ಜಿದಾರರ ಪ್ರಸ್ತಾವನೆಗಳು ರಿಟ್ ಅರ್ಜಿದಾರರ ಪ್ರಸ್ತಾವನೆಗಳಿಗಿಂತ ಉತ್ತಮವಾಗಿವೆ ಎಂದು ಪರಿಷ್ಕರಣಾ ಪ್ರಾಧಿಕಾರವು ನಿರ್ಣಯಿಸಿರುವಾಗ, ನಾವು, ಈ ರಿಟ್ ನ್ಯಾಯಾಲಯದಲ್ಲಿ ಅದನ್ನು ಆಕ್ಷೇಪಿಸುವುದು ಸರಿಯಾದುದಲ್ಲವೆಂದು ಭಾವಿಸಿದ್ದೇವೆ.

13. ಆದುದರಿಂದ, ಈ ರಿಟ್ ಅರ್ಜಿಯನ್ನು ವಜಾ ಮಾಡಲಾಗಿದೆ.

14. ರಿಟ್ ಅರ್ಜಿಯು ವಜಾಗೊಂಡಿರುವುದರಿಂದ, 2016ರ ಐ.ಎ. ಸಂಖ್ಯೆ II ಅನ್ನು ಪರಿಗಣಿಸಲು ಸಾಧ್ಯವಿಲ್ಲ. ಆದುದರಿಂದ ಅದನ್ನು ಸಹ ವಜಾ ಮಾಡಲಾಗಿದೆ.

15. ನಾವು ವೆಚ್ಚಗಳಿಗೆ ಆದೇಶವನ್ನು ಮಾಡಿಲ್ಲ.